# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಕೊಳ್ಳೇಗಾಲ

ಸಿ.ಸಿ ನಂ. 258/2022

| | | | |
|---|---|---|---|
| ಸಾಕ್ಷಿಯ ಹೆಸರು | : | ಅಮುದಾ | |
| ಗಂಡನ ಹೆಸರು | : | ನಾಗರಾಜು | |
| ವಯಸ್ಸು | : | 52 ವರ್ಷ | |
| ಉದ್ಯೋಗ | : | ಗೃಹಿಣಿ | ಚಾಸಾ : 1 |
| ವಾಸ ಸ್ಥಳ | : | ಲೊಕ್ಕನಹಳ್ಳಿ ಗ್ರಾಮ | ಫ್ರಾಸಾ : 1 |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕ : 13.03.2023

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಚಾಸಾ–2 ನನ್ನ ಗಂಡ, ಚಾಸಾ–3 ರಿಂದ 7 ರವರ ಪರಿಚಯವಿರುತ್ತದೆ. ದಿನಾಂಕ 08.01.2021 ರಂದು ನಮ್ಮ ಸಂಬಂಧಿಕರ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದು ಮನೆಗೆ ಸಂಜೆ 7.00 ಗಂಟೆ ಸಮಯದಲ್ಲಿ ಹಿಂತಿರುಗಿ ಬಂದು, ಸ್ನಾನ ಮಾಡಿ, ನಾನು, ನನ್ನ ಗಂಡ ಮನೆಯಲ್ಲಿದ್ದಾಗ ನನ್ನ ಅಣ್ಣನಾದ 1 ನೇ ಆರೋಪಿ ಮತ್ತು ಆತನ ಮಗನಾದ ಪರಮೇಶ ಎಂಬುವವರು ಮನೆಯೊಳಗೆ ಏಕಾಏಕಿ ನುಗ್ಗಿ ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು, ನೀನು ಮತ್ತು ನಿನ್ನ ಗಂಡ ನಮ್ಮ ಅಪ್ಪನ ಜಮೀನನ್ನು ಮಾರಾಟ ಮಾಡಿದ್ದೀರಿ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ಹೇಳಿ ಒಳಗೆ ಇದ್ದ ನನ್ನ ಗಂಡನನ್ನು ನನ್ನ ಅಣ್ಣನ ಮಗನಾದ ಪರಮೇಶನು ಕೈ ಮತ್ತು ತಲೆಗೆ ಹೊಡೆದು ಹೊರಗೆ ಎಳೆದು ಆಗಾ ನಾನು ನನ್ನ ಗಂಡನನ್ನು ಬಿಡಿಸಲು ಹೋದಾಗ ನನ್ನ ಮುಖಕ್ಕೆ ನನ್ನ ಅಣ್ಣ ನನ್ನ ಮುಖದ ಮೇಲೆ, ಮೂಗಿಗೆ ಬಲವಾಗಿ ಹೊಡೆದಾಗ ನನಗೆ ರಕ್ತ ಬಂದಿರುತ್ತದೆ ಆಗಾ ನಾನು ಅಳುತ್ತ ಮನೆಯಿಂದ ಹೊರಗೆ ಬಂದಾಗ ನಮ್ಮ ಅಕ್ಕಪಕ್ಕದ ಮನೆಯವರಾದ ಚಾಸಾ–3 ರಿಂದ 5 ರವರು ನನ್ನನ್ನು ನಮ್ಮ ಅಣ್ಣನಿಂದ ಬಿಡಿಸಿ ಅವರ ಮನೆಗೆ ಕರೆದುಕೊಂಡು ಹೋದರು.

ನಂತರ ನನ್ನ ಗಂಡ ಪೊಲೀಸರಿಗೆ ವಿಚಾರ ತಿಳಿಸಿ ಮತ್ತೆ ಮನೆಯ ಹತ್ತಿರ ಬಂದಾಗ ನನ್ನ ಅಣ್ಣ ಮೈಲುಸ್ವಾಮಿ, ಪರಮೇಶ ಮತ್ತು ಬಸಮ್ಮ, ಮೈಲುಸ್ವಾಮಿಯ ಬಾಮೈದುನಾದ ಸೆಂದಿಲ್ ರವರು ಮನೆಯ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು, ಮಾತಾಡಿ ನಿಂದಿಸಿದರು. ಮಾರಾಟ ಮಾಡಿದ ಭೂಮಿಯನ್ನು ನಮ್ಮ ತಾಯಿ ಪೊನ್ನಮ್ಮ ಮತ್ತು ತಂದೆಯಾದ ಪಳನಿಯಪ್ಪಗೌಂಡರ್ ರವರು ನನ್ನ ಹೆಸರಿಗೆ ಬರೆದುಕೊಟ್ಟಿದ್ದರು.

ನನ್ನ ತಾಯಿಯನ್ನು ನನ್ನ ಅಣ್ಣನಾದ ಮೈಲುಸ್ವಾಮಿ ನೋಡಿಕೊಳ್ಳದ ಕಾರಣ ಅವಳನ್ನು ನಮ್ಮ ಮನೆಯಲ್ಲಿಟ್ಟುಕೊಂಡು ನೋಡಿಕೊಳ್ಳುತ್ತಿದ್ದೆ, ಆಕೆಗೆ ಲಕ್ವ ಹೊಡೆದಿದ್ದು, ಆಕೆಯ ಚಿಕಿತ್ಸೆ ಮತ್ತು ಆರೈಕೆಗಾಗಿ ನಮ್ಮ ತಂದೆ ತಾಯಿ ನೀಡಿದ ಜಮೀನನ್ನು ಮಾರಾಟ ಮಾಡಿದ್ದರಿಂದ ನಮ್ಮ ಅಣ್ಣ ಮತ್ತು ಆತನ ಮಗ ಗಲಾಟೆ ಮಾಡಿ ಹೊಡೆದಿರುತ್ತಾರೆ.

ಅಗ್ರಿಮೆಂಟ್ ಹಾಕಿದ ಹಣವಾದ ಎರಡೂವರೆ ಲಕ್ಷ, 45 ಗ್ರಾಂ ತೂಕದ ಮಾಂಗಲ್ಯ ಸರ ಕಾಣೆಯಾಗಿದ್ದು, ನಮ್ಮ ಮೇಲೆ ಗಲಾಟೆ ಮಾಡಿ ನನಗೆ ಹೊಡೆದು ರಕ್ತ ಗಾಯ ಮಾಡಿದ್ದು, ನನ್ನ ಗಂಡನ ಬಲಕೈನ ಹೆಬ್ಬೆರಳಿಗೆ ನೋವುಂಟು ಮಾಡಿದ್ದು, ನಮ್ಮ ಮೇಲೆ ಗಲಾಟೆ ಮಾಡಿದ ನಾಲ್ಕು ಜನರು ಸೇರಿ ಹಲ್ಲೆ ಮಾಡಿರುತ್ತಾರೆ. ನಾನು ಮತ್ತು ನನ್ನ ಗಂಡನ ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದು ದಿನಾಂಕ 09.01.2021 ರಂದು ಪೊಲೀಸರು ಆಸ್ಪತ್ರೆಗೆ ಬಂದಾಗ ನಾನು ಅವರಿಗೆ ಹೇಳಿಕೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಯು ತಾನು ನೀಡಿದ್ದ ಲಿಖಿತ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಎ ) ಎಂದು ಗುರುತಿಸಲಾಯಿತು.

*ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ಅನುಮತಿಸಿ ಮುಂದೂಡಲಾಯಿತು.*

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ರಘು ಸಿ. ಜೆ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.,ಕೊಳ್ಳೇಗಾಲ